ಒಂದರಲ್ಲಿಯೇ ಸುಮಾರು 60 ಸಾವಿರ ವಿದ್ಯಾರ್ಥಿಗಳು ಇದ್ದಾರೆ. ಇಂತಹ ವುಹಾನ್‌ನಲ್ಲಿ ನೇತ್ರತಜ್ಞರಾಗಿದ್ದ ಮೂವತ್ತನಾಲ್ಕು ವರ್ಷದ ಲೀ ವೆನ್ ಲಿಯಾಂಗ್ 2019ರ ಡಿಸೆಂಬರ್ ತಿಂಗಳ ಕೊನೆಯಲ್ಲಿ ತಮ್ಮ ಆಸ್ಪತ್ರೆಗೆ ಬಂದ ಕೆಲವರಲ್ಲಿ ರಹಸ್ಯಮಯ ಹೊಸ ರೋಗದ ಲಕ್ಷಣಗಳನ್ನು ಗುರುತಿಸಿದರು. ಅದನ್ನು ತಮ್ಮ ಮಿತ್ರ ವೈದ್ಯರ ಜೊತೆ ಹಂಚಿಕೊಂಡ ಲೀ, ಹೊಸ ರೋಗದ ಬಗ್ಗೆ ಜಾಗರೂಕರಾಗಿರುವಂತೆ ಎಚ್ಚರಿಸಿದರು.

2003ರ ಸಾರ್ಸ್ ಅನ್ನು ಹೋಲುವ, ಆದರೆ ಹೊಸದಾದ ಆ ರೋಗಲಕ್ಷಣಗಳನ್ನು ಪರೀಕ್ಷಿಸುವಾಗ ತಮ್ಮನ್ನು ಸೋಂಕಿನಿಂದ ರಕ್ಷಿಸಿಕೊಳ್ಳಲು ಸುರಕ್ಷಾ ಸಾಧನಗಳನ್ನು ಧರಿಸುವಂತೆ ಮನವಿ ಮಾಡಿಕೊಂಡಿದ್ದರು. ಆದರೆ ಜಗತ್ತಿನಲ್ಲೆಡೆ ಸತ್ಯ ಹೇಳುವವರ ಗತಿ ಆದಂತೆ ಲೀ ಅವರಿಗೂ ಆಯಿತು. ಅವರಿಗೆ ಶಹಬ್ಬಾಷ್ ಹೇಳುವ ಬದಲು ನಾಲ್ಕು ದಿನಗಳ ನಂತರ ಪೊಲೀಸರು ಹುಡುಕಿಕೊಂಡು ಬಂದರು. ಅವರನ್ನು ಹೆದರಿಸಿ, ಸುಳ್ಳು ಸುದ್ದಿ ಹಬ್ಬಿಸಿ ಜನರ ಶಾಂತಿಭಂಗ ಮಾಡುತ್ತಿರುವುದಾಗಿ ಆರೋಪಿಸಲಾಯಿತು. 'ತನ್ನದು ತಪ್ಪಾಯಿತು' ಎಂಬ ಮುಚ್ಚಳಿಕೆ ಬರೆಸಿಕೊಂಡರು. ಆದರೆ ಲೀ ಅವರ ಮಾತು ಸತ್ಯವಾಗಿತ್ತು. ಕೆಲವು ದಿನಗಳಲ್ಲೇ ಕಾಳ್ಗಿಚ್ಚಿನಂತೆ ಹಬ್ಬಿದ ಕೊರೊನಾ ವೈರಸ್ ರೋಗ ವುಹಾನ್ ನಗರದ ಗಡಿ ದಾಟಿತು. ಎಲ್ಲರನ್ನೂ ಎಚ್ಚರಿಸಿ ತಮ್ಮ ಕರ್ತವ್ಯ ನಿರ್ವಹಿಸಿದ ಲೀ ವೆನ್‌ಲಿಯಾಂಗ್ ಅದೇ ಕೊರೊನಾ ವೈರಸ್ ಸೋಂಕಿಗೆ ತುತ್ತಾದರು. ಅವರು ತೀರಿಕೊಂಡಾಗ ಇಡೀ ಚೀನಾದ ಜನತೆ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿತು. ಇಲ್ಲಿ ನನಗೆ ವೈದ್ಯಕೀಯ ಇತಿಹಾಸದ ಒಂದು ಮುಖ್ಯ ಘಟನೆ ನೆನಪಾಗುತ್ತಿದೆ. ಹದಿನೆಂಟನೇ ಶತಮಾನದ ವಿಯನ್ನಾದ ವೈದ್ಯ ವಿದ್ಯಾರ್ಥಿಯಾದ ಇಗ್ನಾಜ್ ಸೆಮಿ ಲೆವಿಸ್ ರೋಗಿಯನ್ನು ಪರೀಕ್ಷಿಸುವ ಮೊದಲು ಹಾಗೂ ಪರೀಕ್ಷಿಸಿದ ನಂತರ ಆ್ಯಂಟಿಸೆಪ್ಟಿಕ್ ದ್ರಾವಣದಲ್ಲಿ ಚೆನ್ನಾಗಿ ಕೈ ತೊಳೆದುಕೊಂಡರೆ ರೋಗ ಹರಡುವುದನ್ನು ತಡೆಗಟ್ಟಬಹುದು ಎಂಬ ಸಲಹೆಯನ್ನು ಕೊಟ್ಟಾಗ, ಅವರಿಗೆ ದೊರೆತ ಬಹುಮಾನ ಏನು ಗೊತ್ತೆ? ಅವರನ್ನು ಹೀಯಾಳಿಸಿ ಕಾಲೇಜಿನಿಂದಲೇ ಹೊರದಬ್ಬಿದ್ದು! ಇಂದಿಗೂ ಅವರು ಹೇಳುವ ಸತ್ಯ ಎಷ್ಟು ಪ್ರಸ್ತುತವೆಂದರೆ ಇಲ್ಲಿ ಬರೆಯುತ್ತಿರುವ ಕೊರೊನಾ ವೈರಸ್ ರೋಗವನ್ನು ನಿಯಂತ್ರಿಸಲು ಅದೇ ಮುಖ್ಯ ಕ್ರಿಯೆಯಾಗಿದೆ.

**ಚೆರ್ರಿ ಹೂಗಳು**
**ನಿಟ್ಟುಸಿರು ಬಿಟ್ಟವೆ**
**ಸದ್ಯ ಶ್ವಾಸಕೋಶಗಳಲ್ಲ!**

ಈ ಹೊಸ ರೋಗದ ಹೆಸರು 'ಕೋವಿಡ್–19' ಅಂದರೆ 'ಕೊರೊನಾ ವೈರಸ್ ಡಿಸೀಸ್ 2019'. ಈ ರೋಗಕ್ಕೆ ಕಾರಣವಾಗಿರುವ ವೈರಸ್ ಹೆಸರು 'ಸಾರ್ಸ್ ಕೋವಿ–2' ಅಂದರೆ 'ಸಿವಿಯರ್ ಅಕ್ಯೂಟ್ ರೆಸ್ಪಿರೇಟರಿ ಸಿಂಡ್ರೋಮ್ – ಕೊರೊನಾ ವೈರಸ್–2'.

2002ರಲ್ಲಿ ದಕ್ಷಿಣ ಚೀನಾದ ಗ್ವಾಂಗ್‌ಡಾಂಗ್ ಪ್ರಾಂತದಲ್ಲಿ ಪ್ರಾರಂಭವಾಗಿ ಕೆಲವು ದೇಶಗಳಿಗೆ ಹರಡಿ ಭೀತಿ ಹುಟ್ಟಿಸಿದ್ದ ಸಾರ್ಸ್ ಹಾಗೂ 2012ರಲ್ಲಿ ಸೌದಿ ಅರೇಬಿಯಾದಲ್ಲಿ ಹಬ್ಬಿದ್ದ ಮೆರ್ಸ್ (ಮಿಡಲ್ ಈಸ್ಟ್ ರೆಸ್ಪಿರೇಟರಿ ಸಿಂಡ್ರೋಮ್) ಇವೆರಡೂ ಸಹ ಕೊರೊನಾ ವೈರಸ್‌ಗಳೇ. ಕೊರೊನಾ ವೈರಸ್‌ಗಳು ಬಹಳ ಹಿಂದಿನಿಂದಲೂ ಇವೆ. ವೈರಸ್‌ಗಳಲ್ಲಿ ಕೊರೊನಾ ವೈರಸ್‌ಗಳದ್ದು ಒಂದು ದೊಡ್ಡ ಕುಟುಂಬ. ಹಲವಾರು ಕೊರೊನಾ ವೈರಸ್‌ಗಳಿವೆ. ಕೊರೊನಾ ವೈರಸ್‌ಗಳು 'ಆರ್‌ಎನ್‌ಎ' ವೈರಾಣುಗಳು. ಅವು ಚೆಂಡಿನ ಹಾಗಿವೆ. ಅವುಗಳ ಮೇಲ್ಮೈ ಹೂದಳಗಳಂತಹ ಆಕೃತಿಗಳಿಂದ ಆವರಿಸಿದ್ದು, ಸೂರ್ಯನ ಸುತ್ತಲಿನ ಕೊರೊನಾವನ್ನು ನೆನಪಿಸುತ್ತವೆ. ಹಾಗಾಗಿ ಅವುಗಳಿಗೆ ಆ ಹೆಸರು ಬಂದಿದೆ.




ನಮಗೆ ಸಾಮಾನ್ಯವಾಗಿ ಬರುವ ನೆಗಡಿಯಿಂದ ಮೊದಲಾಗಿ ಶ್ವಾಸಕೋಶಗಳಲ್ಲಿ ತೀವ್ರ ಕಾಯಿಲೆ ತರಬಲ್ಲ ಕೊರೊನಾ ವೈರಸ್‌ಗಳೂ ಇವೆ. ಈ ಕೊರೊನಾ ವೈರಸ್‌ಗಳು ಕೆಲವು ಪ್ರಾಣಿಗಳಲ್ಲಿಯೂ ವಾಸಿಸುತ್ತವೆ. ಉದಾಹರಣೆಗೆ ಒಂಟೆ, ಹಸು, ಬೆಕ್ಕು, ಬಾವಲಿ ಮುಂತಾದವು. ಸಾಮಾನ್ಯವಾಗಿ ಪ್ರಾಣಿಗಳು ಕೊರೊನಾ ವೈರಸ್‌ಗಳನ್ನು ಮನುಷ್ಯನಿಗೆ ಹರಡುವುದಿಲ್ಲ. ಕೆಲವು ಆಂತರಿಕ ಹಾಗೂ ಬಾಹ್ಯ ಕಾರಣಗಳಿಂದಾಗಿ ಅವುಗಳ ವಂಶವಾಹಿಗಳಲ್ಲಿ ಬದಲಾವಣೆ (ಮ್ಯುಟೇಶನ್) ಗಳಾದಾಗ ಅವುಗಳು ಸಂಪೂರ್ಣ ಹೊಸ ರೂಪ ಪಡೆದು ಪ್ರಾಣಿಗಳಿಂದ ಮನುಷ್ಯನಿಗೆ ಹರಡುವ ಸಾಧ್ಯತೆಗಳಿರುತ್ತವೆ.

ಪ್ರಸ್ತುತ ಕೋವಿಡ್–19 ರೋಗದ ವೈರಸ್ 'ಸಾರ್ಸ್ ಕೋವಿ–2' ಯಾವ ಪ್ರಾಣಿಯಿಂದ ಮನುಷ್ಯನಿಗೆ ಹರಡಿದೆ ಎಂದು ಇನ್ನೂ ನಿಖರವಾಗಿ ಸಾಬೀತಾಗಿಲ್ಲ. ಕೆಲವು ವಿಜ್ಞಾನಿಗಳ ಪ್ರಕಾರ ಹಾವುಗಳಿಂದ ಇವು ಹರಡಿರುವ



ಸಾಧ್ಯತೆಗಳಿದ್ದರೆ, ಮತ್ತೆ ಕೆಲವು ಬಾವಲಿ ಅಥವಾ ಪ್ಯಾಂಗೋಲಿಯನ್‌ಗಳಿಂದ ಹರಡಿರಬಹುದು ಎನ್ನುತ್ತಿದ್ದಾರೆ. ಈ ಪ್ರಭೇದ ಜಿಗಿತ ಹೇಗಾಯಿತು ಎಂಬುದು ಖಚಿತವಾಗಿಲ್ಲ. ಜಗತ್ತಿನ ಮುಖ್ಯ ಸಂಶೋಧನಾ ಸಂಸ್ಥೆ 'ಸಿಡಿಸಿ' (ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್‌ಶನ್) ವಿಜ್ಞಾನಿಗಳ ಪ್ರಕಾರ ಬಾವಲಿಗಳೇ ಇವುಗಳ ಮೂಲ ಸ್ಥಾನವಾಗಿವೆ. ಒಂದು ಆತಂಕಕಾರಿ ಸಂಗತಿ ಎಂದರೆ, ಪ್ರಾಣಿಗಳಿಂದ ಹರಡಿದ ಈ ವೈರಸ್ ನಂತರ ಮನುಷ್ಯನಿಂದ ಮನುಷ್ಯನಿಗೆ ಅತಿ ವೇಗದಲ್ಲಿ